ಜನರಿಗೆ ನೀವು ಯಾವರೀತಿಯ ರಕ್ಷಣೆಯನ್ನು ಕೊಟ್ಟಿದ್ದೀರಿ? ಕುಡಿಯುವ ನೀರಿಲ್ಲದೆ ಸತ್ತ ಸುದ್ದಿ ಇವೊತ್ತಿನ ಪತ್ರಿಕೆಗಳಲ್ಲಿಯೂ ಬಂದಿದೆ. ಇದು ಸರಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೆ, ಪತ್ರಿಕೆಗಳಲ್ಲಿ ಈ ಸುದ್ದಿಯನ್ನು ನಾವೂ ನೋಡಿದ್ದೇವೆ. ಆದರೆ ಈ ಸುದ್ದಿಯಲ್ಲಿನ ಸತ್ಯಾಂಶ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನೋಡ ಬೇಕಾಗುತ್ತದೆ. ಕರ್ನಾಟಕದಲ್ಲಿ ಎಲ್ಲಿಯೂ ಕುಡಿಯುವ ನೀರು ಇಲ್ಲದೆ ಸಾಯತಕ್ಕಂಥ ಪರಿಸ್ಥಿತಿಯು ಇಲ್ಲ. ಮುಂದೆಯೂ ಬರುವುದಿಲ್ಲ, ಸುದ್ದಿಯ ಸತ್ಯಾಂಶವನ್ನು ನೋಡಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಸರಕಾರದವರು ಈ ವಿಚಾರದಲ್ಲಿ ನಿಜಕ್ಕೂ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆ. ಕುಡಿಯುವ ನೀರು ಇಲ್ಲದೆ ಸತ್ತಿದ್ದಾರೆ ಅಂದರೆ ಅದು ಬಹಳ ನೋವು ತರುವಂಥ ವಿಚಾರವಾಗಿದೆ.

ಅಧ್ಯಕ್ಷರು :- ತಾವುಗಳು ಸರಕಾರಕ್ಕೆ ಸೂಚನೆಯನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ವಿಚಾರಣೆ ಮಾಡಿಸಿ ಸತ್ಯಾಂಶ ಏನು ಎಂಬ ಬಗ್ಗೆ ಒಂದು ಸ್ಟೇಟ್‌ಮೆಂಟ್‌ನ್ನು ಸರಕಾರದವರು ಮಾಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೆ, ಇದು ಬಹಳ ಗುಭೀರವಾದಂಥ ವಿಚಾರವಾಗಿದೆ. ನಾವು ಇದರ ಬಗ್ಗೆ ವರದಿಯನ್ನು ತರಿಸಿಕೊಂಡು, ಆ ಬಗೆಗಿನ ವಾಸ್ತವಾಂಶದ ವರದಿಯನ್ನು ಕೊಡುತ್ತೇವೆ ಎಂದು ಹೇಳ ಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ:- ಆ ಕ್ಷೇತ್ರವು ಮಾನ್ಯ ಸದಸ್ಯರಾದ ವೆಂಕಟೇಶ್ ರವರಿಗೆ ಸಂಬಂಧಪಟ್ಟದ್ದು ಅವರ ಮನೆಯಲ್ಲಿ ಮದುವೆ ಕಾರ್ಯ ಇದ್ದುದರಿಂದ ಅವರು ಸದನಕ್ಕೆ ಬಂದಿಲ್ಲ....

ಅಧ್ಯಕ್ಷರು:- ಅವರು ಮದುವೆ ಮಾಡಿಕೊಂಡು ಬರಲಿ ಬಿಡಿ.....

ಶ್ರೀ ಸಿ. ಬೈರೇಗೌಡ:- ಅಧ್ಯಕ್ಷರೆ, ನಾನು ಮತ್ತೊಂದು ವಿಚಾರವನ್ನು ಸರಕಾರದ ಗಮನಕ್ಕೆ ತರುತ್ತಿದ್ದೇನೆ. ವಿರೋಧ ಪಕ್ಷದವರು ಪ್ರತಿನಿಧಿಸುತ್ತಿರತಕ್ಕಂಥ ಕ್ಷೇತ್ರಗಳಲ್ಲಿ ಈ ರೀತಿಯಾದಂಥ ಮಲತಾಯಿ ಧೋರಣೆಯನ್ನು ಸರಕಾರದವರು ಅನುಸರಿಸುತ್ತಾ ಇದ್ದಾರೆ. ಈ ವಿಚಾರವನ್ನು ನಾನು ಚರ್ಚೆಯಲ್ಲಿ ಭಾಗವಹಿಸುವಾಗ ಪ್ರಸ್ತಾಪಿಸುತ್ತೇನೆ. ಆದಕ್ಕೆ ಇದೊಂದು ಉದಾಹರಣೆ ಮಾತ್ರ. ಹೀಗೇ ಮಾಡುವುದು ಸರಿಯಲ್ಲ.

ಅಧ್ಯಕ್ಷರು:- ಈ ಬಗ್ಗೆ ಸರಕಾರದವರು ನಾಳೆ ಸ್ಟೇಟ್‌ಮೆಂಟ್ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಹಿಂದೆ ಇದೇ ತಾಲ್ಲೂಕಿನಲ್ಲಿ ಹಸಿವಿನಿಂದ ಜನರು ಸತ್ತಾಗ ಇವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ಅದು ಬರೀ ಭರವಸೆ ಮಾತ್ರ.... ಇಂಥ ಭರವಸೆಯನ್ನು ಅನೇಕಸಾರಿ ಮಾಡಿದ್ದೀರಿ. ಇಂಥ ನಿಮ್ಮ ನೀತಿಯನ್ನು ಖಂಡಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ರವರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಮಾನ್ಯ ಬೈರೇಗೌಡರು, ವಾಟಾಳ್ ನಾಗರಾಜ್‌ರವರು ಕೆಲವು ವಿಚಾರಗಳನ್ನು ಹೇಳಿದರು. ಆದರೆ ನಾನು ನಾಲ್ಕು ದಿವಸಗಳ ಹಿಂದೆ ಮಾನ್ಯ ಕಾನೂನು ಸಚಿವರು ಮತ್ತು ಕೈಗಾರಿಕಾ ಮಂತ್ರಿಗಳೊಂದಿಗೆ ವಿಚಾರ ಮಾಡಿದ್ದೇನೆ. ಈ ವಿಚಾರ ಹಿಂದೆಯೂ ಬಂದಿದೆ. ಇದರ ವಾಸ್ತವಾಂಸವನ್ನು ನಾನು ತಿಳಿದುಕೊಳ್ಳುತ್ತೇನೆ. ಅಲ್ಲಿನ ಶಾಸಕರಾದ ಶ್ರೀ ವೆಂಕಟೇಶ್‌ರವರು ಈ ವಿಚಾರದಲ್ಲಿ ಕೇಳಿದಾಗ ಇಂಥ ಘಟನೆ ನಡೆದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಇಂಥ ವಾಸ್ತವಾಂಶಗಳ ಬಗ್ಗೆ ತಿಳಿದುಕೊಳ್ಳದೇ ಒಮ್ಮೆಗೆ ವಾಕ್ ಔಟ್ ಮಾಡಿದರೆ ಇದು ಏನನ್ನು ತೋರಿಸುತ್ತದೆ? ಸರಕಾರದ ಮಲತಾಯಿ ಧೋರಣೆ ಏನೂ ಇಲ್ಲ. ಕ್ಷೇತ್ರದ ಶಾಸಕರೇ ಇಂಥ ಘಟನೆ ನಡೆದಿಲ್ಲ ಎಂದು ಹೇಳುತ್ತಾರೆ. ಈ ಸದನದಲ್ಲಿ ಏನಾದರೂ ಒಂದು ವಿಚಾರ ಹೇಳಬೇಕಾದರೆ ಪತ್ರಿಕೆಗಳಲ್ಲಿ ಬಂದಿದ್ದೇ ಸತ್ಯಾಂಶ ಎಂದು ಹೇಳಿದರೆ ಹೇಗೆ ? ಅದು ಸರಿಯಿಲ್ಲದಿದ್ದರೆ ಸರಕಾರ ಪೇಚಿಗೆ ಸಿಕ್ಕಿ ಕೊಳ್ಳಬೇಕಾಗುತ್ತದೆ.